# ಕರ್ನಾಟಕದ ಎರಡನೇ ಹಂತದ ಗ್ರಾಮ ಸ್ವರಾಜ್ ಯೋಜನೆ ಅಡಿಯಲ್ಲಿ ಪರಿಸರ ನಿರ್ವಹಣೆಯ ಚೌಕಟ್ಟು

## ಕಾರ್ಯನಿರ್ವಹಣೆಯ ಸಾರಾಂಶ

ವರದಿಯನ್ನು ಸಿದ್ದಪಡಿಸಿದ್ದು

**ವಿಕೇಂದ್ರೀಕರಣ ವಿಶ್ಲೇಷಣಾ ಕೋಶ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

**ಕರ್ನಾಟಕ ಸರ್ಕಾರ**

# ಕಾರ್ಯನಿರ್ವಹಣೆಯ ಸಾರಾಂಶ

**ಪರಿಚಯ:**

ಕರ್ನಾಟಕ ಸರ್ಕಾರವು ವಿಶ್ವ ಬ್ಯಾಂಕಿನ ಬೆಂಬಲದೊಂದಿಗೆ ಗ್ರಾಮ ಸ್ವರಾಜ್ಯೋಜನೆ ಅಡಿಯಲ್ಲಿ ಅತ್ಯಂತ ಹಿಂದುಳಿದ 39 ತಾಲ್ಲೂಕುಗಳಲ್ಲಿನ ಗ್ರಾಮ ಪಂಚಾಯಿತಿಗಳಲ್ಲಿ 2006–14 ರ ಅವಧಿಯಲ್ಲಿ ಪರಿಸರ ನಿರ್ವಹಣೆ ಮಾರ್ಗಸೂಚಿಗಳನ್ನು ಅಳವಡಿಸಿಕೊಂಡಿದೆ. ಈ ಯೋಜನೆಯು ಮುಕ್ತ ಅನುದಾನ ಒದಗಿಸುವ ಮತ್ತು ನಿರ್ವಹಣೆ ಸಾಮರ್ಥ್ಯಗಳನ್ನು ವೃದ್ಧಿಸುವ ಮೂಲಕ ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಗೆ ಸಂಪನ್ಮೂಲಗಳನ್ನು ಹೆಚ್ಚಿಸಲು ಪ್ರಯತ್ನಿಸಿದೆ. ಗ್ರಾಮ ಸ್ವರಾಜ್ ಯೋಜನೆಯ ಮೊದಲನೆ ಹಂತವು ತೃಪ್ತಿದಾಯಕವಾಗಿ ಪೂರ್ಣಗೊಂಡ ನಂತರದಲ್ಲಿ ಕರ್ನಾಟಕ ಸರ್ಕಾರವು ಪ್ರಸ್ತಾಪಿಸಿದ ಎರಡನೇ ಹಂತದ ಯೋಜನೆಯ ಸಲುವಾಗಿ ಅತಿ ಹಿಂದುಳಿದ 40 ತಾಲ್ಲೂಕುಗಳಲ್ಲಿನ ಗ್ರಾಮ ಪಂಚಾಯಿತಿಗಳು ಪ್ರಯೋಜನ ಪಡೆಯುವುದು ಹಾಗೂ ಮೊದಲ ಹಂತದ ಗ್ರಾಮ ಪಂಚಾಯಿತಿಗಳು ಸ್ವಯಂ ಪುಷ್ಟಿಕರ ಸಾಧಿಸುವುದನ್ನು ಬೆಂಬಲಿಸುವುದಾಗಿದೆ. ಕರ್ನಾಟಕ ರಾಜ್ಯದ 25 ಜಿಲ್ಲೆಗಳಲ್ಲಿನ 79 ತಾಲ್ಲೂಕುಗಳಲ್ಲಿ ಈ ಎರಡನೇ ಹಂತದ ಗ್ರಾಮ ಸ್ವರಾಜ್ ಯೋಜನೆಯ ವ್ಯಾಪ್ತಿಯು ಇರುತ್ತದೆ.

ಯೋಜನೆಯ ಉದ್ದೇಶವೇ ಕರ್ನಾಟಕ ರಾಜ್ಯದ ಅತ್ಯಂತ ಮತ್ತು ಅತಿ ಹಿಂದುಳಿದ ತಾಲ್ಲೂಕುಗಳಲ್ಲಿನ ಗ್ರಾಮ ಪಂಚಾಯಿತಿಗಳ ಆದ್ಯತೆ ಸೇವೆಗಳನ್ನು ತಮ್ಮ ದೃಷ್ಟಿಕೋನದಿಂದ ಯೋಜನೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದೇ ಆಗಿದೆ.

**ಯೋಜನೆಯ ಮೂರು ಕೆಳಗಿನ ಅಂಶಗಳನ್ನು ಒಳಗೊಂಡಿದೆ:**

**ಘಟಕ ಎ**– ಗ್ರಾಮ ಪಂಚಾಯಿತಿಗಳಿಗೆ ಮುಕ್ತ ಅನುದಾನ: ಅನುದಾನ, ಹಣಕಾಸು ಸಂಪನ್ಮೂಲ ಸೃಷ್ಟಿ, ವೃದ್ಧಿ ಅಥವಾ ಮೂಲಸೌಕರ್ಯಗಳ ಕಾಮಗಾರಿಗಳಲ್ಲಿ ಪುರ್ನವಸತಿಯನ್ನು ಮಾಡುತ್ತದೆ.

**ಘಟಕ ಬಿ**–ಸಾಂಸ್ಥಿಕ ಅಭಿವೃದ್ಧಿ: ಈ ಘಟಕವುಯೋಜನೆ ಅಭಿವೃದ್ಧಿಯ ಉದ್ದೇಶದ ಕಡೆಗೆ ಪ್ರಗತಿಯನ್ನು ಖಚಿತಪಡಿಸಲು ಅಗತ್ಯವಾದ ಸಮಗ್ರ ಸಾಂಸ್ಥಿಕ ಅಭಿವೃದ್ಧಿ ಚಟುವಟಿಕಗೆಳನ್ನು ಮತ್ತು ಹೂಡಿಕೆ ಶ್ರೇಣಿಯನ್ನು ಒಳಗೊಳ್ಳುತ್ತದೆ.

**ಘಟಕ** ಸಿ– ರಾಜ್ಯದ ಸಾಮರ್ಥ್ಯಾಭಿವೃದ್ಧಿ: ಈ ಘಟಕವು ಪಂಚಾಯತ್ ವ್ಯವಸ್ಥೆ ಮತ್ತು ಯೋಜನೆಯ ಮೇಲ್ವಿಚಾರಣೆ, ಅನುಕೂಲ ಹಾಗೂ ನಿರ್ವಹಿಸಲು ರಾಜ್ಯ ಮಟ್ಟದ ಸ್ಥಾನ ವ್ಯವಸ್ಥೆಗಳಲ್ಲಿ ಸಕ್ರಿಯಗೊಳಿಸುವುದಕ್ಕೆ ಯೋಜನೆಯ ನಿರ್ವಹಣೆಯ ಬೆಂಬಲವನ್ನು ಒಳಗೊಂಡಿದೆ.

**ಕರ್ನಾಟಕ ಗ್ರಾಮ ಸ್ವರಾಜ್ ಎರಡನೇ ಹಂತದ ಯೋಜನೆ ಅಡಿಯಲ್ಲಿ ಪರಿಸರ ನಿರ್ವಹಣೆ ಚೌಕಟ್ಟಿನ ಅಭಿವೃದ್ಧಿ:**

ವಿಶ್ವ ಬ್ಯಾಂಕ್‌ನ ಕಾರ್ಯನೀತಿಗಳ ರಕ್ಷಣೆಗೆ ಅಗತ್ಯವಾದ ಪರಿಸರದ ಮೌಲ್ಯಮಾಪನ (ಒಪಿ 4.01), ಅರಣ್ಯ (ಒಪಿ 4.36) ಹಾಗೂ ಸ್ವಾಭಾವಿಕ ಅವಾಸ ಸ್ಥಾನಗಳ (ಒಪಿ 4.04) ಪರಿಸರ ನಿರ್ವಹಣಾ ಚೌಕಟ್ಟು ಒಂದನ್ನು ತಯಾರಿಸಲಾಗುತ್ತದೆ ಇದು ಗ್ರಾಮ ಸ್ವರಾಜ್ ಯೋಜನೆಯ ಮೊದಲನೇ ಹಂತದಲ್ಲಿ ಜಾರಿಯಲ್ಲಿದ್ದ ಪರಿಸರ ನಿರ್ವಹಣಾ ಮಾರ್ಗಸೂಚಿ ಕಾರ್ಯವಿಧಾನಗಳನ್ನು ಆಧರಿಸಿದ್ದು ಮತ್ತು ಅದೇ ಕಲಿಕೆಯ ಹಾದಿಯನ್ನು ಹೊಂದಿದೆ.

ಎರಡನೇ ಹಂತದಲ್ಲಿ ಗ್ರಾಮ ಪಂಚಾಯಿತಿಯ ಕಾಮಗಾರಿಗಳು ಪರಿಸರ ನಿರ್ವಹಣಾ ಚೌಕಟ್ಟಿನ ಸಂಭಾವ್ಯ ಪ್ರಭಾವಗಳನ್ನು ನಿರ್ಧರಿಸುವ ಹಾಗು ಪರಿಸರ ಸಂಬಂದಿತ ಮುಖ್ಯ ಪ್ರದೇಶಗಳನ್ನು ಗುರುತಿಸುವುದು ಮತ್ತು ಪರಿಸರ ನಿರ್ವಹಣೆಗೆ ಕಾರ್ಯತಂತ್ರ ಹೆಣೆಯುವುದು ಮತ್ತು ಪರಿಸರ ನಿರ್ವಹಣೆಯ ಯೋಜನೆಗಳನ್ನು ರೂಪಿಸವುದನ್ನು ಕೇಂದ್ರೀಕರಿಸಿದೆ. ಕರ್ನಾಟಕ ಗ್ರಾಮ ಸ್ವರಾಜ್ ಯೋಜನೆಯ ಪರಿಸರ ನಿರ್ವಹಣೆ ಚೌಕಟ್ಟು ಈ ಕೆಳಗಿನ ಪ್ರಮುಖ ಅಂಶಗಳ ಮೇಲೆ ಕೇಂದ್ರೀಕೃತವಾಗಿದೆ.

1. ನಿರ್ಧಿಷ್ಟತೆ ಮತ್ತು ಬಳಕೆದಾರರ ಸ್ನೇಹಪರತೆ ತರುವ ಕಾರ್ಯವಿಧಾನಗಳನ್ನು (ಪರಿಸರ ಮಾರ್ಗಸೂಚಿಗಳು) ಸರಳೀಕರಣಗೊಳಿಸುವುದು.
2. ತಾಂತ್ರಿಕ ಸಿಬ್ಬಂದಿಗಳ (ಸಹಾಯಕ ಕಾರ್ಯನಿರ್ವಹಕ, ಕಿರಿಯ, ಸಹಾಯಕ, ಕಾರ್ಯನಿರ್ವಹಕ ಎಂಜಿನಿಯರಿಂಗ್) ಪ್ರಬಲ ಸಾಮರ್ಥ್ಯಾಭಿವೃದ್ಧಿಯ ವರ್ಧನೆಯೊಂದಿಗೆ ತಾಂತ್ರಿಕ ಅಂಶಗಳ ಮೇಲೆ ಪರಿಸರ ಸ್ನೇಹಿ ವಿನ್ಯಾಸಗೊಳಿಸುವುದು.
3. ಮೂಲಸೌಕರ್ಯಗಳ ಸುಸ್ಥಿರ ನಿರ್ವಹಣೆ ಮತ್ತು ಉತ್ತಮ ಪರಿಸರ ನಿರ್ವಹಣೆಯ ಸಾಮನ್ಯ ಅಂಶಗಳ ಕಡೆಗೆ ಗ್ರಾಮ ಪಂಚಾಯಿತಿಯ ಕಾರ್ಯಕಾರಿ ಅಧಿಕಾರಿಗಳು ಮತ್ತು ಸಮುದಾಯಗಳಲ್ಲಿ ಜಾಗ್ರತಿ ಹೆಚ್ಚಿಸುವುದು.

4. ಅಂತರ್ಜಲ ದುರ್ಬಳಕೆ ಪ್ರದೇಶಗಳಲ್ಲಿ, ಪಶ್ಚಿಮ ಘಟ್ಟಗಳ ಸೂಕ್ಷ್ಮ ಪರಿಸರ ಪ್ರದೇಶಗಳಲ್ಲಿ, ಜಲಮಾಲಿನ್ಯ ಪ್ರದೇಶಗಳಲ್ಲಿ, ಬರ ಪೀಡಿತ ಪ್ರದೇಶಗಳಲ್ಲಿ ಹಾಗೂ ಕರಾವಳಿ ಪ್ರದೇಶಗಳಲ್ಲಿನ ಪರಿಸರ ತಾಣಗಳಲ್ಲಿ ತಾಂತ್ರಿಕ ಬೆಂಬಲ ಒಳಗೊಂಡಂತೆ ಗಮನ ಹರಿಸುತ್ತದೆ.

ಪರಿಸರ ನಿರ್ವಹಣೆ ಚೌಕಟ್ಟಿನ ಸಮಾಲೋಜನೆಗಳ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ವಿಶ್ವ ಬ್ಯಾಂಕ್ ಸಿಬ್ಬಂದಿ ಹಾಗೂ ಯೋಜನಾ ಮೇಲ್ವಿಚಾರಣ ಘಟಕವು ಒಳಗೊಂಡಂತೆ ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ರಾಜ್ಯ ಮಟ್ಟದ ಪರಿಸರ ಕಾಳಜಿಯುಳ್ಳ ಮಾಧ್ಯಮಿಕ ಸಂಶೋಧನೆ; ವಿಭಾಗ ಮಟ್ಟದಲ್ಲಿ ಮಾನದಂಡಗಳ ಪರೀಶಿಲನಾ ವಿಮರ್ಶೆ, ಪರಿಸರ ಮಾರ್ಗದರ್ಶನಗಳು ಮತ್ತು ಮೊದಲ ಹಂತದ ಯೋಜನೆಯ ಪರಿಸರ ವಿಮರ್ಶೆ. ಪ್ರಮುಖ ಮಧ್ಯಸ್ಥಗಾರರ ವೀಕ್ಷಣೆಗಳನ್ನು ಪಡೆಯಲು ದಿನಾಂಕ 11–12–2015 ರಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಸಭಾಂಗಣ, ಬೆಂಗಳೂರಿನಲ್ಲಿ ಆಯೋಜಿಸಲಾಯಿತು ಇದರಲ್ಲಿ ಪ್ರಮುಖವಾಗಿ ಹೂಡಿಕೆದಾರರ ಸಮಾಲೋಚನೆಗಳ ಮೂಲಕ ಸಲಹೆ ಮತ್ತು ಸೂಚನೆಗಳನ್ನು ಪಡೆಯಲಾಯಿತು, ಅದರಂತೆ ವರದಿಯಲ್ಲಿ ಸೇಪರ್ಡೆಗೊಳಿಸಿ ಕರಡು ವರದಿಯನ್ನು ವಿಕೇಂದ್ರೀಕರಣ ವಿಶ್ಲೇಷಣಾ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ವಿಶ್ವ ಬ್ಯಾಂಕ್‌ನ ವೇಬ್ ಸೈಟಿನಲ್ಲಿ ಬಹಿರಂಗಪಡಿಸಲಾಗಿದೆ. ಅಂತಿಮ ವರದಿಯನ್ನು ಕಾಲಾನಂತರದಲ್ಲಿ ವೇಬ್ ಸೈಟ್‌ಗಳಲ್ಲಿ ಬಹಿರಂಗಪಡಿಸಲಾಗುವುದು.




**ಪರಿಸರ ನಿರ್ವಹಣೆ ಚೌಕಟ್ಟಿನ ವಿವರಗಳು:**

ಪರಿಸರ ನಿರ್ವಹಣೆ ಚೌಕಟ್ಟಿನ ಉದ್ದೇಶ ಗ್ರಾಮ ಪಂಚಾಯಿತಿಗಳು ಕೈಗೊಂಡ ಅನೇಕ ಚಟುವಟಿಕೆಗಳ ಪರಿಸರ ಸಂರಕ್ಷಣೆ ಖಚಿತಪಡಿಸಿಕೊಳ್ಳಲು ಹಾಗೂ ಪರಿಸರ ಸುಸ್ಥಿರ ನಿರ್ವಹಣೆಯಲ್ಲಿ ಪಂಚಾಯತ್‌ರಾಜ್ ಸಂಸ್ಥೆಗಳ ಸಾಮರ್ಥ್ಯಗಳನ್ನು ಹೆಚ್ಚಿಸವುದುಆಗಿದೆ.

**ಪರಿಸರ ನಿರ್ವಹಣೆಚೌಕಟ್ಟಿನ ವಿಧಾನಗಳು:**

- ಗ್ರಾಮ ಪಂಚಾಯಿತಿಗಳ ದೃಷ್ಟಿಕೋನದಿಂದ ಕೂಡಿದ ಯೋಜನೆಗಳು ಮತ್ತು ವಾರ್ಷಿಕಕ್ರಿಯಾ ಯೋಜನೆಗಳನ್ನು ಒಳಗೊಂಡಂತೆ ಪರಿಸರ ಸಂರಕ್ಷಣೆ ನಿರ್ವಹಣೆಯ ಆಯಾಮಗಳನ್ನು ಸಂಯೋಜಿಸುವುದು.
- ಗ್ರಾಮ ಪಂಚಾಯಿತಿಗಳ ಎಲ್ಲಾ ಮೂಲಸೌಕರ್ಯ ಕಾಮಗಾರಿಗಳ ನಿರ್ಮಾಣ, ಕಾರ್ಯಚರಣೆ ಮತ್ತು ನಿರ್ವಹಣೆ ಅಗತ್ಯದ ಒಳಗೊಂಡಂತೆ ಪರಿಸರ ಸಂರಕ್ಷಣೆ ನಿರ್ವಹಣೆಯ ಆಯಾಮಗಳನ್ನು ಸಂಯೋಜಿಸುವುದು.
- ಸಾಮರ್ಥ್ಯಾಭಿವೃದ್ಧಿ ಕಾರ್ಯಯೋಜನೆಗಳಲ್ಲಿ ಪರಿಸರ ಸಂರಕ್ಷಣೆ ನಿರ್ವಹಣೆಯ ಆಯಾಮಗಳನ್ನು ಸಂಯೋಜಿಸುವುದು.

ಪರಿಸರ ಸಂರಕ್ಷಣೆ ನಿರ್ವಹಣೆಯ ಕಾರ್ಯರಂಭಕ್ಕೆ ಸಾಂಸ್ಥಿಕ ವ್ಯವಸ್ಥೆ ಅಡಿಯಲ್ಲಿ ರಾಜ್ಯ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಗಳ ಮಟ್ಟದಲ್ಲಿ ಜವಾಬ್ದಾರಿಗಳನ್ನು ಗುರುತಿಸುವುದನ್ನು ಹೊಂದಿದೆ. ಗ್ರಾಮ ಪಂಚಾಯಿತಿ ಯೋಜನೆಗಳನ್ನು (ದೃಷ್ಟಿಕೋನದಿಂದ ಕೂಡಿದ ಯೋಜನೆಗಳು ಮತ್ತು ವಾರ್ಷಿಕ ಕ್ರಿಯಾ ಯೋಜನೆಗಳು) ಮತ್ತು ಗ್ರಾಮ ಪಂಚಾಯಿತಿಗಳ ಮೂಲಸೌಕರ್ಯ ಕಾಮಗಾರಿಗಳ ಮೇಲ್ವಿಚಾರಣೆಯ ಪರಿಸರ ವಿಮರ್ಶೆ; ತಾಂತ್ರಿಕ (ಎಂಜಿನಿಯರಿಂಗ್) ಸಿಬ್ಬಂದಿಗಳ ಸಾಮರ್ಥ್ಯ ವರ್ಧನೆ ಜೊತೆಗೆ ಪಂಚಾಯತ್ ರಾಜ್ ಸಂಸ್ಥೆಗಳ ಪೈಕಿ ಜಾಗೃತಿ ಮೂಡಿಸುವುದು ಮತ್ತು ಗ್ರಾಮ ಪಂಚಾಯಿತಿಗಳು ಪರಿಸರ ಹಾನಿ ತಾಣಗಳ ಬೆಳಕಿಗೆ ನೆರವು ನೀಡುವುದರ ಕಡೆಗೆ ಗಮನ ಕೊಡುವುದು.

**ಪರಿಸರ ನಿರ್ವಹಣೆ ಚೌಕಟ್ಟಿನ ಅನುಷ್ಠಾನ ಯೋಜನೆಯಲ್ಲಿ ಒಳಗೊಂಡಿದೆ:**

- ಗ್ರಾಮ ಪಂಚಾಯಿತಿಗಳು ರೂಪಿಸುವ ದೃಷ್ಟಿಕೋನದ ಯೋಜನೆಗಳು ಮತ್ತು ವಾರ್ಷಿಕ ಕ್ರೀಯಾ ಯೋಜನೆಗಳ ಪರಿಸರ ಮಾರ್ಗಸೂಚಿಗಳನ್ನು ಬಳಸಿಕೊಂಡು ಪರಿಸರ ವಿಮರ್ಶೆ ಮಾಡುವುದು.
    - ರಚನೆ ಮತ್ತು ರಚಿಸಿಲ್ಲದಿರುವುದರ ಪಟ್ಟಿಯ ಅನುಸರಣೆ ಮೇಲೆ ಖಚಿತಪಡಿಸಿಕೊಳ್ಳುವುದಕ್ಕೆ ತಪಾಸಣೆಗೊಳಪಡಿಸುವುದು.
    - ತಾಂತ್ರಿಕ ವಿನ್ಯಾಸಗಳು, ಅಯವ್ಯಯ ಮತ್ತು ಒಪ್ಪಂದಗಳನ್ನು ಸಂಯೋಜಿಸುವುದಕ್ಕೆ ತಗ್ಗಿಸುವಿಕೆಯ ಕ್ರಮಗಳ ಅಗತ್ಯವಿದೆ.

- ಸಾಮರ್ಥ್ಯಾಭಿವೃದ್ಧಿ ನಿರ್ಮಾಣ:
    - ಪಂಚಾಯತ್‌ರಾಜ್ ಸಂಸ್ಥೆ ಅಡಿಯಲ್ಲಿ ಬರುವ ತಾಂತ್ರಿಕ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ನಿರ್ಮಾಣಮಾಡುವುದು.
    - ಚುನಾಯಿತ ಪ್ರತಿನಿಧಿಗಳು ಮತ್ತುಪಂಚಾಯತ್ ರಾಜ್ ಸಂಸ್ಥೆ ಅಡಿಯಲ್ಲಿ ಬರುವ ಇತರೆ ಸಿಬ್ಬಂದಿಗಳ ಸಾಮರ್ಥ್ಯಾಭಿವೃದ್ಧಿ ನಿರ್ಮಾಣಮಾಡುವುದು.
- ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ:
    - ಅಂತರಿಕ ಮೇಲ್ವಿಚಾರಣೆ: ಮೂಲಸೌಕರ್ಯ ಕಾಮಗಾರಿಗಳ ಅಳವಡಿಸಿದ ಪರಿಸರ ಮಾರ್ಗಸೂಚಿಗಳ ಅನುಷ್ಠಾನದ ಅಂತರಿಕ ಮೇಲ್ವಿಚಾರಣೆ.
    - ಬಾಹ್ಯ ಲೆಕ್ಕ ಪರಿಶೋದನೆ: ಕರ್ನಾಟಕ ಗ್ರಾಮ ಸ್ವರಾಜ್ ಎರಡನೇ ಯೋಜನೆ ಅಡಿಯಲ್ಲಿ ಪರಿಸರ ಮೇಲ್ವಿಚಾರಣೆಯ ಬಾಹ್ಯ ಲೆಕ್ಕ ಪರಿಶೋದನೆ.
- ಆಯ್ದ ಗ್ರಾಮ ಪಂಚಾಯಿತಿಗಳಲ್ಲಿ ಪರಿಸರ ಮೇಲ್ವಿಚಾರಣೆಗಳನ್ನು ಪರೀಕ್ಷಿಸುವುದು:
    - ಪಶ್ಚಿಮ ಘಟ್ಟಗಳ ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಅಧ್ಯಾಯನ.
    - ಕರಾವಳಿ ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಅಧ್ಯಾಯನ.
    - ಅಂತರ್ಜಲ ದುರ್ಬಳಕೆ ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಅಧ್ಯಾಯನ.
    - ಕಳಪೆ ಗುಣಮಟ್ಟದ ನೀರುಳ್ಳ ಪ್ರದೇಶಗಳ ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಅಧ್ಯಾಯನ.
- ಬರ ಪಡಿತ ಪ್ರದೇಶಗಳ ಗ್ರಾಮ ಪಂಚಾಯಿತಿಗಳಲ್ಲಿ ಪ್ರಾಯೋಗಿಕ ಅಧ್ಯಾಯನ.
- ಸಾಂಸ್ಥಿಕ ವ್ಯವಸ್ಥೆ:
    - ರಾಜ್ಯ ಮಟ್ಟದಲ್ಲಿನ ಪರಿಸರ ತಜ್ಞರು ಒಟ್ಟಾರೆ ಪರಿಸರ ನಿರ್ವಹಣೆಯ ಅನುಷ್ಠಾನದ ಸಮನ್ವಯ ಸಾದಿಸುವುದು.
    - ತಾಲ್ಲೂಕು ಮಟ್ಟದ ಪರಿಸರ ತಾಂತ್ರಿಕ (ಎಂಜಿನಿಯರಿಂಗ್) ಸಿಬ್ಬಂದಿಯು ಪರಿಸರಕ್ಕೆ ಸಂಬಂಧಿಸದ ಏಕೀಕರಣವನ್ನು ಸಾದಿಸವುದು.

**ಕಾಲಾನುಕ್ರಮ ಮತ್ತು ಆಯವ್ಯಯ:**

ಪರಿಪೂರ್ಣ ವಿವರದಿಂದ ಕೂಡಿದ ಪರಿಸರ ನಿರ್ವಹಣೆಯ ಚೌಕಟ್ಟು ಯೋಜನೆಯನ್ನು 6 ವರ್ಷಗಳ ಅವಧಿಗೆ ನೀಡಲಾಗುತ್ತದೆ. ಪರಿಸರ ನಿರ್ವಹಣೆಯ ಚೌಕಟ್ಟಿನ ಅನುಷ್ಠಾನಕ್ಕೆ ಒಟ್ಟು ಆಯವ್ಯಯ 1,86,50000 (ಒಂದು ಕೋಟಿ ಎಂಬತ್ತಾರು ಲಕ್ಷದ ಐವತ್ತು ಸಾವಿರ ಮಾತ್ರ) ರೂಪಾಯಿಗಳು ಎಂದು ಅಂದಾಜಿಸಿದ್ದು ಮತ್ತು ಇದರಲ್ಲಿ ಯೋಜನೆಯ ವೆಚ್ಚವು ಒಳಗೊಂಡಿದೆ.